## ದಿನಾಂಕ:29-06-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ:11(47)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಯಲಹಂಕ ತಾಲ್ಲೂಕು ಬ್ಯಾಟರಾಯನಪುರ ವಲಯದ ಅಟ್ಟೂರು ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಹಿನ್ನಲೆಯಲ್ಲಿ ಬೆಂಗಳೂರು ಯಲಹಂಕ ತಾಲ್ಲೂಕು ಬ್ಯಾಟರಾಯನಪುರ ವಲಯದ ಅಟ್ಟೂರು ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪಟ್ಟಿ ರೂ.480.00 ಲಕ್ಷಗಳು ಬೇಕಾಗಿರುತ್ತದೆಯೆಂದು 2009-10 ರ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮುಖ್ಯ ಅಭಿಯಂತರರು (ಯೋಜನೆ-2) ರವರು ಮಂಡಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮುಖ್ಯ ಅಭಿಯಂತರರು (ಯೋಜನೆ-2) ರವರು ಸಲ್ಲಿಸಿರುವ ಬೆಂಗಳೂರು ಯಲಹಂಕ ತಾಲ್ಲೂಕು ಬ್ಯಾಟರಾಯನಪುರ ವಲಯದ ಅಟ್ಟೂರು ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪಟ್ಟಿ ರೂ.480.00 ಲಕ್ಷಗಳಿಗೆ 000-10-N-P-P-O-CD-019 ಕಾಮಗಾರಿ ಸಂಕೇತವನ್ನು ನೀಡಲಾಗಿದ್ದು, ಪ್ರಸ್ತುತ ಆಡಳಿತಾತ್ಮಕ ಅನುಮೋದನೆ ನೀಡಲು ಆದೇಶ ಕೋರಿ ಪ್ರಸ್ತಾವನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಗೆ ಟಿಪ್ಪಣಿಯೊಂದಿಗೆ ಮಂಡಿಸಲು ಮುಖ್ಯ ಅಭಿಯಂತರರು ಯೋಜನೆ-2 ರವರು ಆಯುಕ್ತರವರನ್ನು ಕೋರಿರುತ್ತಾರೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು 2009-10ನೇ ಸಾಲಿನ ಆಯವ್ಯಯ ಪುಟ ಸಂಖ್ಯೆ 69 ರಲ್ಲಿನ ಶೀರ್ಷಿಕೆ **ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಅಡಿಯಲ್ಲಿ ಉಪ ಶೀರ್ಷಿಕೆ ಕೆರೆಗಳ (ನಿರ್ವಹಣೆ)** ಪಿ.2091 ಅಡಿಯಲ್ಲಿ ಲಭ್ಯವಿರುವ ಅನುದಾನ 600 ಲಕ್ಷದಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯ ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಕೆರೆಯ ವಿವರ | ಅಂದಾಜು ಪಟ್ಟಿ |
|---|---|---|
| 1 | ಬೆಂಗಳೂರು ಯಲಹಂಕ ತಾಲ್ಲೂಕು ಬ್ಯಾಟರಾಯನಪುರ ವಲಯದ ಅಟ್ಟೂರು ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿ | ರೂ.480.00 ಲಕ್ಷಗಳು |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2009-10ನೇ ಸಾಲಿನ ದರಪಟ್ಟಿಯ ದರಗಳಂತೆ ತಯಾರಿಸಿ ಕಡತದಲ್ಲಿ ಲಗತ್ತಿಸಿರುತ್ತಾರೆ ಮತ್ತು ಆಡಳಿತಾತ್ಮಕ ಅನುಮೋದನೆ ಕೋರಿ ಕಡತವನ್ನು ಮುಖ್ಯ ಅಭಿಯಂತರರು (ಯೋಜನೆ-2) ರವರು ಮಂಡಿಸಿದ್ದು, ಅವರ ಕೋರಿಕೆಯಂತೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್

ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಆಯುಕ್ತರವರ ದಿನಾಂಕ:08–06–2010 ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು.

**"ದಿನಾಂಕ:08–06–2010 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ".**

ಶ್ರೀ.ವೆಂಕಟೇಶಮೂರ್ತಿ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ದಿನಾಂಕ:08–06–2010 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು."

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು.